
ಕೃಷಿಯಲ್ಲಿ ಸಾಕಷ್ಟು ಬದಲಾವಣೆ ಆಗುತ್ತಿದೆ. ವಿವಿಧ ಬೆಳೆಗಳನ್ನು ಬೆಳೆಯುವುದರ ಜತೆಗೆ ಆದಾಯದ ಮೂಲವಾಗಿ ಹೈನುಗಾರಿಕೆ, ಮೀನುಗಾರಿಕೆಯನ್ನೂ ರೈತರು ಅಳವಡಿಸಿಕೊಂಡು ಲಾಭ ಕಾಣುತ್ತಿದ್ದಾರೆ. ಸಮುದ್ರ ಮೀನುಗಾರಿಕೆ ಮಾತ್ರವಲ್ಲದೆ ಒಳನಾಡು ಮೀನುಗಾರಿಕೆಯೂ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದೆ. ಕೌಶಲರಹಿತ ಯುವಕರಿಗೆ ಲಾಭದಾಯಕ ಉದ್ಯೋಗವಾಗಿ ಮೀನುಗಾರಿಕೆ ಸಹಕಾರಿಯಾಗಿದೆ. 'ವಿಶ್ವ ಮೀನುಗಾರರ ದಿನ' ಹಿನ್ನೆಲೆಯಲ್ಲಿ ಒಳನಾಡು ಮೀನುಗಾರಿಕೆಯಲ್ಲಿ ಯಶಸ್ಸು ಕಂಡ ಕೆಲವು ರೈತರ ಯಶೋಗಾಥೆ ನಿಮ್ಮಮುಂದೆ.



# ಲಾಭದಾಯಕ ಮೀನು ಸಾಕಣೆ

ವಿಶ್ವ ಮೀನುಗಾರರ ದಿನ ಇಂದು



ದಾವಣಗೆರೆ ಸಮೀಪದ ದೇವರಹಟ್ಟಿ ಗ್ರಾಮದ ಮುಜಾಮಿಲ್ ಬಾಷಾ ಅವರ ಜಮೀನಿನಲ್ಲಿ ನಿರ್ಮಿಸಿರುವ ಮೀನು ಸಾಕಾಣಿಕೆ ಕೊಳ.

## ಮುಜಾಮಿಲ್ ಬಾಷಾ ಮೀನುಗಾರಿಕೆ ಬಾದ್‌ಷಾ

ಕೃಷಿ ಜತೆಗೆ ಮೀನುಗಾರಿಕೆಯಲ್ಲೂ ತೊಡಗಿಕೊಂಡರೆ ಆದಾಯ ಹೆಚ್ಚಲಿದೆ ಎಂಬುದನ್ನು ದಾವಣಗೆರೆ ತಾಲೂಕು ದೇವರಹಟ್ಟಿ ಗ್ರಾಮದ ಮುಜಾಮಿಲ್ ಬಾಷಾ ಸಾಧಿಸಿ ತೋರಿಸಿದ್ದಾರೆ. 12 ವರ್ಷಗಳಿಂದ ಮೀನು ಸಾಕಾಣಿಕೆ ಮಾಡುತ್ತಿರುವ ಅವರು ಅದರಲ್ಲಿ ಯಶಸ್ಸು ಕಂಡಿದ್ದಾರೆ.



ಮೀನು ಸಾಕಾಣಿಕೆಯನ್ನು ಸರಿಯಾಗಿ ಮಾಡಿದರೆ ಅದು ನಮ್ಮ ಕೈ ಹಿಡಿಯುತ್ತದೆ. ತಪ್ಪಿದರೆ ನಷ್ಟ ಅನುಭವಿಸಬೇಕಾಗುತ್ತದೆ. ನೀರು, ಆಹಾರ ಸೇರಿ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕಾಗುತ್ತದೆ.

| ಮುಜಾಮಿಲ್ ಬಾಷಾ ದೇವರಹಟ್ಟಿ

ಮುಜಾಮಿಲ್ ಮೂಲತಃ ಭತ್ತದ ಬೆಳೆಗಾರ. 6 ಎಕರೆ ಜಮೀನಿದೆ. ಮೀನುಗಾರಿಕೆ ಮಾಡಬೇಕೆಂಬ ಆಸಕ್ತಿಯಿಂದ 2012ರಲ್ಲಿ ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ರೈತರ ಯಶಸ್ವಿ ಮೀನುಗಾರಿಕೆ ಬಗ್ಗೆ ಅಧ್ಯಯನ ಮಾಡಿ, ಅದನ್ನು ತಮ್ಮ ಜಮೀನಿನಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆ.

ಆರಂಭದಲ್ಲಿ 3 ಎಕರೆ ಜಮೀನಿನಲ್ಲಿ ತಲಾ ಒಂದೂವರೆ ಎಕರೆ ವಿಸ್ತೀರ್ಣದ 2 ಕೊಳಗಳನ್ನು ನಿರ್ಮಿಸಿದರು. ಮೊದಲೇ ಇದ್ದ 2 ಕೊಳವೆ ಬಾವಿಗಳ ಜತೆಗೆ ಹೆಚ್ಚುವರಿಯಾಗಿ ಎರಡು ಬೋರ್‌ವೆಲ್ ಕೊರೆಸಿ ಕೊಳಗಳನ್ನು ತುಂಬಿಸಿದರು. ಆಂಧ್ರದಿಂದ ತಂದ 15 ಸಾವಿರ ಮೀನು ಮರಿಗಳನ್ನು ಅದರಲ್ಲಿ ಬಿಟ್ಟರು. 2016ರಲ್ಲಿ ತಲಾ 1 ಎಕರೆಯ ಮತ್ತೆರಡು ಕೊಳ ನಿರ್ಮಿಸಿದರು. ಒಟ್ಟು 4 ಕೊಳಗಳಲ್ಲಿ ಈ ವರ್ಷ 1.60 ಲಕ್ಷ ಮೀನು ಮರಿಗಳನ್ನು ಬಿಟ್ಟಿದ್ದಾರೆ. ಪಂಗೇಶಿಯಸ್, ಕಟ್ಲಾ, ರೋಹು, ರೂಪಚಂದ ಜಾತಿಯ ಮೀನುಗಳನ್ನು ಸಾಕಾಣಿಕೆ ಮಾಡಿದ್ದಾರೆ. ವರ್ಷಕ್ಕೆ 30 ರಿಂದ 35 ಟನ್ ಮೀನು ಉತ್ಪಾದನೆ ಮಾಡುತ್ತಿದ್ದಾರೆ. ದಾವಣಗೆರೆ ಸ್ಥಳೀಯ ಮಾರುಕಟ್ಟೆಯಲ್ಲಿ ಮೀನು ಮಾರಾಟದ ಜತೆಗೆ ವಿಜಯಪುರ, ಧಾರವಾಡ, ಭದ್ರಾವತಿ, ಕೆಲವೊಮ್ಮೆ ಆಂಧ್ರಪ್ರದೇಶಕ್ಕೂ ಕಳಿಸುತ್ತಾರೆ. ಜತೆಗೆ ಇತರ ರೈತರಿಗೂ ಪ್ರೇರಣೆ ನೀಡಿದ್ದಾರೆ ಎನ್ನುತ್ತಾರೆ ಮೀನುಗಾರಿಕೆ ಉಪ ನಿರ್ದೇಶಕ ಅಣ್ಣಪ್ಪ ಸ್ವಾಮಿ.

## ಮೀನು ಪಾಲಕ ವೆಂಕಟೇಶರಾವ್

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ರಾಮದುರ್ಗದ ವೆಂಕಟೇಶರಾವ್ ಜವಾದಿ ಎಂಬ ರೈತ ಮೀನುಗಾರಿಕೆಯಲ್ಲಿ ತೊಡಗಿದ್ದು, ವಾರ್ಷಿಕ ಲಕ್ಷಾಂತರ ರೂ. ಆದಾಯ ಗಳಿಸುವುದಲ್ಲದೆ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಮಾಹಿತಿ ಒದಗಿಸುವ ಕೆಲಸಕ್ಕೂ ಅಣಿಯಾಗಿದ್ದಾರೆ.

ನೀರಾವರಿ ಸೌಲಭ್ಯ ಹೊಂದಿರುವ ಗಂಗಾವತಿ ಭಾಗದಲ್ಲಿ ಭತ್ತ ಬೆಳೆಯುವುದೇ ಹೆಚ್ಚು. ಆದರೆ, ರೈತ ವೆಂಕಟೇಶರಾವ್ ತಮ್ಮ 15 ಎಕರೆ ಕೃಷಿ ಭೂಮಿಯಲ್ಲಿ ಸಮಗ್ರ ಕೃಷಿ ಅಳವಡಿಸಿಕೊಂಡಿದ್ದಾರೆ. ಅದರಲ್ಲಿ ಮಾವು, ಬಾಳೆ, ತೆಂಗು, ಅಡಕೆ ಬೆಳೆಯುತ್ತಿದ್ದು, 2019ರಿಂದ ಮೀನುಗಾರಿಕೆ ಕೃಷಿಯಲ್ಲಿ ತೊಡಗಿದ್ದು ಅದರಲ್ಲೂ ಪರಿಣತರಾಗಿದ್ದಾರೆ. ವೆಂಕಟೇಶರಾವ್ ಒಟ್ಟು ಆರು ಎಕರೆಯಲ್ಲಿ ಮತ್ಸ್ಯಕೃಷಿ ಮಾಡುತ್ತಿದ್ದು, ಕೊಪ್ಪಳ ತಾಲೂಕಿನ ಮುನಿರಾಬಾದ್ ಡ್ಯಾಂ ಅಥವಾ ಶಿವಪುರ ಬಳಿ ಇರುವ ನರ್ಸರಿಯಿಂದ ಮೀನುಮರಿಗಳನ್ನು ತರುತ್ತಾರೆ. ಒಂದು ವರ್ಷ ಅಥವಾ ಒಂದು ವರ್ಷದ ಎರಡು ತಿಂಗಳವರೆಗೆ ಅವುಗಳನ್ನು ಉಪಚರಿಸುತ್ತಾರೆ. ಒಂದು ಎಕರೆಯಲ್ಲಿ 3000 ಸಾವಿರಕ್ಕೂ ಹೆಚ್ಚು ಮೀನುಗಳನ್ನು ಸಾಕುವ ಅವರು, ಫಿಶ್ ಫೀಡ್ ಮತ್ತು ಅಕ್ಕಿ ತೌಡು ಆಹಾರವಾಗಿ ನೀಡುತ್ತಾರೆ. ಕಾಟ್ಲಾ, ರೋಹು, ಮೃಗಾಲ ಎಂಬ ದೇಸಿ ಹಾಗೂ ಕಾಮನ್ ಕಾರ್ಪ್, ಗ್ರಾಸ್ ಕಾರ್ಪ್ ಎಂಬ ಚೈನೀಸ್ ತಳಿಯ ಮೀನುಗಳಿವೆ. ಇವುಗಳಿಗೆ ವಾರ್ಷಿಕ 10 ಟನ್ ಆಹಾರ ಬೇಕಿದ್ದು, ಇದಕ್ಕೆ ಒಂದೂವರೆ ಲಕ್ಷ ರೂ. ವೆಚ್ಚ ತಗುಲುತ್ತದೆ. ಒಟ್ಟಾರೆ ವಾರ್ಷಿಕ ವೆಚ್ಚ ಭರಿಸಿ 1.50 ರಿಂದ 2 ಲಕ್ಷ ರೂ. ಲಾಭ ಪಡೆಯುತ್ತಾರೆ.



ಮುಂದಿನ ಪೀಳಿಗೆಗೂ ಕೃಷಿ ಬಗ್ಗೆ ಆಸಕ್ತಿ ಬೆಳೆಯಲಿ ಎಂದು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಮತ್ಸ್ಯಕೃಷಿ ಬಗ್ಗೆ ಪ್ರಾಯೋಗಿಕವಾಗಿ ಮಾಹಿತಿ ನೀಡುತ್ತಿದ್ದೇನೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಬೇಸರವಾಗದಿರಲೆಂದು ಮೀನು ಕೃಷಿಯಲ್ಲೇ ಬೋಟಿಂಗ್ ವ್ಯವಸ್ಥೆ ಕಲ್ಪಿಸಿದ್ದೇನೆ.

| ವೆಂಕಟೇಶರಾವ್ ರಾಮದುರ್ಗ

## ಮತ್ಸ್ಯ ಕೃಷಿಯಲ್ಲಿ ಚರಣ್ ಖುಷಿ

ಮಲೆನಾಡಿನ ಸಾಂಪ್ರದಾಯಿಕ ಕೃಷಿ ಜತೆಗೆ ಒಳನಾಡು ಮೀನುಗಾರಿಕೆಯಲ್ಲಿ ಶಿವಮೊಗ್ಗ ತಾಲೂಕು ಹಾತಿಕಟ್ಟೆಯ ಚರಣ್ 9 ವರ್ಷಗಳಿಂದ ಮೀನು ಮರಿಗಳ ಪಾಲನೆ ಮಾಡಿ, ವ್ಯಾಪಾರದಲ್ಲೂ ಯಶಸ್ಸು ಸಾಧಿಸಿದ್ದಾರೆ. 8 ಎಕರೆಯಲ್ಲಿ ಮೀನು ಕೃಷಿ ಮಾಡುತ್ತಿರುವ ಚರನ್, ಪ್ರತಿ ವರ್ಷ 10-12 ಲಕ್ಷ ರೂ. ವಹಿವಾಟು ನಡೆಸುತ್ತಾ 4-5 ಲಕ್ಷ ರೂ. ಲಾಭ ಗಳಿಸುತ್ತಿದ್ದಾರೆ. ಭದ್ರಾವತಿ ತಾಲೂಕಿನ ಬಿಆರ್‌ಪಿಯಿಂದ ಪ್ರತಿ ವರ್ಷ 1.25 ಕೋಟಿ ಚಿಕ್ಕ ಮೀನು ಮರಿಗಳು ಹಾಗೂ ಕೋಲ್ಕತದಿಂದ 30-40 ಲಕ್ಷ ಮರಿಗಳನ್ನು ತರಿಸಿ ಅವುಗಳನ್ನು ಒಂದು ತಿಂಗಳ ಕಾಲ ಪಾಲನೆ ಮಾಡುತ್ತಾರೆ. ಬಳಿಕ ರೈತರಿಗೆ ಬೇಡಿಕೆಗೆ ತಕ್ಕಂತೆ ಮೀನು ಮರಿಗಳನ್ನು ಮಾರಾಟ ಮಾಡುತ್ತಾರೆ. ಕಾಟ್ಲಾ, ಗೌರಿ, ರೋಹು, ರೂಪ್‌ಚಂದ್, ಸಿಲ್ವರ್ ಕಾಟ್ಲಾ, ಗ್ರಾಸ್ ಕಾರ್ಪ್ ಮೀನು ಮರಿಗಳನ್ನು ಚರಣ್ ಪಾಲನೆ ಮಾಡುತ್ತಿದ್ದಾರೆ. ನನ್ನ ಈ ದಾರಿಯಲ್ಲಿ ತಂದೆಯ ಸಂಪೂರ್ಣ ಸಹಕಾರವಿದೆ. ಮೀನು ಮರಿ ಪಾಲನೆಗೆ ತಾತ್ಕಾಲಿಕವಾಗಿ ಹಣ ಹೂಡಿದರೆ ಸಾಕು. ಒಂದು ತಿಂಗಳು ಸರಿಯಾಗಿ ಮರಿಗಳನ್ನು ಪಾಲನೆ ಮಾಡಿದರೆ ಹಾಕಿದ ಬಂಡವಾಳದ ಜತೆಗೆ ಲಾಭಾಂಶವೂ ಬರುತ್ತದೆ ಎನ್ನುತ್ತಾರೆ ಚರಣ್.



ಪ್ರತಿ ದಿನ ನಾನೇ ಮುಂದೆ ನಿಂತು ಮೀನು ಮರಿಗಳಿಗೆ ಆಹಾರ ಹಾಕಿ, ಅವುಗಳ ಮೇಲೆ ನಿಗಾ ಇರಿಸುತ್ತೇನೆ. ಆಸಕ್ತಿ ಹಾಗೂ ಶ್ರದ್ಧೆಯಿಂದ ಮರಿಗಳ ಪಾಲನೆ ಮಾಡಿದರೆ ನಷ್ಟದ ಸಾಧ್ಯತೆಗಳಿರುವುದಿಲ್ಲ. ನಾನು ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾಗಲೇ ಮೀನು ಮರಿಗಳ ಪಾಲನೆಗೆ ಮುಂದಾದೆ. ಈಗದು ಕೈ ಹಿಡಿದಿದೆ

| ಚರಣ್ ಹಾತಿಕಟ್ಟೆ

## ಹವ್ಯಾಸದ ಮೀನು ಕೃಷಿ ಸಿದ್ಧಾರ್ಥ್‌ಗೆ ಆಸರೆ

ದ.ಕ. ಜಿಲ್ಲೆ ಪುತ್ತೂರಿನ ಕುರಿಯ ಹೊಸಮಾರು ನಿವಾಸಿ ಸಿದ್ಧಾರ್ಥ ಶೆಟ್ಟಿ ಕುರಿಯ ಹವ್ಯಾಸವಾಗಿ 100 ಮೀನು ಮರಿಯನ್ನು ಮೂಡಿಗೆರೆಯಿಂದ ತರಿಸಿ 2018ರಲ್ಲಿ ಸಾಕಣೆ ಆರಂಭಿಸಿದರು. ಆದರೆ ಅದು ಕಾಯಕವಾಗಿ ಪ್ರಸ್ತುತ ವರ್ಷಕ್ಕೆ 2,500 ಮೀನು ಮಾರಾಟ ಮಾಡುವ ಮೂಲಕ ಯಶಸ್ಸಿನತ್ತ ಸಾಗುತ್ತಿದ್ದಾರೆ.



ಹಂತ ಹಂತವಾಗಿ ಮೀನು ಸಾಕಣೆ ಹೆಚ್ಚು ಮಾಡುತ್ತಾ ಬಂದ ಸಿದ್ಧಾರ್ಥ, ಸದ್ಯ ಸುಮಾರು 6 ಸಾವಿರ ಮರಿಗಳನ್ನು ಬಿಟ್ಟಿದ್ದಾರೆ. ಮೀನು ಕೃಷಿ ಮಾಡುವವರು ಒಮ್ಮೆಲೇ ಸಾವಿರಾರು ಮೀನಿನ ಮರಿ ತಂದು ಕೈಸುಟ್ಟುಕೊಳ್ಳುವ ಬದಲು 100ರಿಂದ 500 ಮೀನು ಬೆಳೆಸುವ ಮೂಲಕ ಸಾಕಣೆ ಪ್ರಾರಂಭಿಸಬೇಕು. ಕೃಷಿ ಹೊಂಡ ಇರುವವರು ಕನಿಷ್ಠ 100 ಮೀನು ಸಾಕಣೆ ಮಾಡಬಹುದು. 1 ಮೀನಿಗೆ ವರ್ಷಕ್ಕೆ 100 ರೂ. ಖರ್ಚು ತಗುಲುತ್ತಿದ್ದು, ಕೆ.ಜಿಗೆ 250- 300 ರೂ.ಗೆ ಮಾರಾಟ ಮಾಡಲಾಗುತ್ತದೆ ಎನ್ನುತ್ತಾರೆ ಸಿದ್ಧಾರ್ಥ್. ಭಾರತದ ಮೇಜರ್ ಕ್ರಾಪ್(ಐಎಂಸಿ)ನಲ್ಲಿ 4 ವಿಧದ ಮೀನುಗಳಿದ್ದು, ರುವು, ಕಾಟ್ಲಾ, ಕಾಮನ್ ಕಾಟ್, ಗ್ರಾಸ್ ಕಾಟ್ ಮೀನಿನ ತಳಿಯನ್ನು ಕೆರೆಯಲ್ಲಿ ಬೆಳೆಯಲಾಗುತ್ತದೆ. ಇದಕ್ಕೆ ಆಹಾರ ನೀಡಿದರೂ, ವೇಗವಾಗಿ ಬೆಳೆಯುವುದಿಲ್ಲ. ದೊಡ್ಡದಾಗಿ ಬೆಳೆಯಲು 3-4 ವರ್ಷ ಬೇಕಾಗುತ್ತದೆ. ಮರೆಲ್(ಮಡೆಂಜಿ), ಟಿಲಾಪಿಯಾ, ಪಿಂಗೆಸಿಸ್, ರೂಪ್‌ಚಂದಾ ಮೀನು ಸಾಕಣೆ ಮಾಡಲಾಗುತ್ತಿದೆ. ಇದು ವರ್ಷದೊಳಗೆ ಬೆಳವಣಿಗೆಯಾಗಿ ಮಾರಾಟಕ್ಕೆ ಲಭ್ಯವಾಗುತ್ತದೆ ಎನ್ನುತ್ತಾರೆ ಸಿದ್ಧಾರ್ಥ್.

## ಜವರನಾಯಕ ಮರೆಲ್ ಮೀನು ಸಾಕಣೆ ಕಾಯಕ



ಮೀನುಗಾರಿಕೆಯಲ್ಲಿ ನಿರತರಾಗಿರುವ ರೈತ ಜವರ ನಾಯಕ

ಮೈಸೂರು ಭಾಗದಲ್ಲಿ ಸಾಮಾನ್ಯವಾಗಿ ರೈತರು ಕಾಟ್ಲಾ ಹಾಗೂ ಜಿಲೇಬಿ ಮೀನನ್ನು ಹೆಚ್ಚಾಗಿ ಸಾಕಣೆ ಮಾಡುತ್ತಾರೆ. ಮಾರುಕಟ್ಟೆಯಲ್ಲೂ ಈ ಮೀನುಗಳು ಹೆಚ್ಚಾಗಿ ಕಂಡು ಬರುತ್ತದೆ. ಆದರೆ, ಜಿಲ್ಲೆಯ ಕುಮಾರಬೀಡು ಗ್ರಾಮದ ರೈತ ಜವರನಾಯಕ 'ಮರೆಲ್' ಎಂಬ ವಿಶೇಷ ತಳಿಯ ಮೀನು ಸಾಕಣೆ ಮಾಡಿ ಯಶಸ್ಸು ಕಂಡಿದ್ದಾರೆ. ಕಳೆದ 2 ವರ್ಷಗಳಿಂದ ಕುಮಾರಬೀಡು ಗ್ರಾಮದಲ್ಲಿ ಜವರನಾಯಕ ಮೀನು ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 10 ಸಾವಿರ ಮತ್ತು 11 ಸಾವಿರ ಚದರ ಅಡಿಯ 2 ಕೆರೆಗಳನ್ನು ನಿರ್ಮಾಣ ಮಾಡಿ ಮರೆಲ್ ಮೀನು ಸಾಕಣೆ ಮಾಡುತ್ತಿದ್ದಾರೆ. 2 ಕೆರೆಯಲ್ಲಿ ಒಂದು ಬಾರಿಗೆ ಒಟ್ಟು 6 ಸಾವಿರ ಮೀನು ಮರಿಗಳನ್ನು ಬಿಡಲಾಗುತ್ತದೆ. ಮರೆಲ್ ಮೀನನ್ನು ಆಂಧ್ರಪ್ರದೇಶ ಹಾಗೂ ಕೇರಳ ರಾಜ್ಯದಲ್ಲಿ ಹೆಚ್ಚಾಗಿ ಸಾಕಣೆ ಮಾಡುತ್ತಾರೆ. ಜವರನಾಯಕ ಅವರು ಕೇರಳ ಹಾಗೂ ಆಂಧ್ರಪ್ರದೇಶದಿಂದ ಮೀನುಮರಿಗಳನ್ನು ತರಿಸಿಕೊಂಡು ಸಾಕಣೆ ಮಾಡಿ ಉತ್ತಮ ಆದಾಯ ಕಂಡಿದ್ದು, ಅದರಿಂದ ಉತ್ತಮ ಜೀವನ ನಡೆಸುತ್ತಿದ್ದಾರೆ. ಅವರ ಮೀನನ್ನು ಚೆನ್ನೈನಿಂದ ವರ್ತಕರು ಆಗಮಿಸಿ ನೇರವಾಗಿ ಖರೀದಿಸುತ್ತಾರೆ. ಹಾಗಾಗಿ ಮಾರುಕಟ್ಟೆ ಸಮಸ್ಯೆ ಉದ್ಭವಿಸದು. ಇವರ ಕೃಷಿ ಸಾಧನೆಗೆ ದಸರಾ ಉತ್ಸವದಲ್ಲಿ ಮೀನುಗಾರಿಕೆ ಇಲಾಖೆಯಿಂದ ಅತ್ಯುತ್ತಮ ರೈತ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

Hosadiganta Pg 10

### ಕಾಡಂಚಿನಲ್ಲಿ ಹಣ್ಣು ಸಂಗ್ರಹಿಸುವ ಮಹಿಳೆಯರು | ಒಂದು ಬುಟ್ಟಿ ಹಣ್ಣು 600 ರೂ.ಗೆ ಮಾರಾಟ

# ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಸೀತಾಫಲ ಆಸರೆ

**ಬಂಗಾರಪೇಟೆ:** ಸೀತಾಫಲ ವ್ಯಾಪಾರವು ಮಹಿಳೆಯರ ಜೀವನೋಪಾಯಕ್ಕೆ ಆಸರೆಯಾಗಿದೆ, ಗ್ರಾಮೀಣ ಭಾಗದಲ್ಲಿ ವಾಸಿಸುವ ಮಹಿಳೆಯರು ಈ ಹಣ್ಣು ಸಂಗ್ರಹಿಸಿ, ಮಾರಾಟ ಮಾಡುವುದರಿಂದ ಉತ್ತಮ ಆದಾಯ ಗಳಿಸುತ್ತಿದ್ದಾರೆ.

ತಾಲೂಕಿನ ಕಾಡಂಚಿನ ಗಡಿಭಾಗದಲ್ಲಿರುವ ಗ್ರಾಮದಲ್ಲಿ ವಾಸಿಸುವ ಜನರು ನೈಸರ್ಗಿಕವಾಗಿ ಬೆಳೆದ ಸೀತಾಫಲ ಗಿಡ ಸಾಮಾನ್ಯವಾಗಿ ಹೊಲದ ಅಂಚಿನಲ್ಲಿ, ಗುಡ್ಡಗಾಡು ಪ್ರದೇಶ, ಅಥವಾ ಅರಣ್ಯಪ್ರದೇಶದಲ್ಲಿ, ಹಳೆಯ ತೋಟದಲ್ಲಿ ಬೆಳೆಯುತ್ತವೆ.

ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಈ ಹಣ್ಣುಗಳು ಹೇರಳವಾಗಿ ಲಭ್ಯವಿರುತ್ತವೆ ಮತ್ತು ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಇರುತ್ತದೆ, ವರ್ಷದಲ್ಲಿ ಒಂದು ಬಾರಿ ಹಣ್ಣುಗಳನ್ನು ಬಿಡುತ್ತವೆ ಈ ಸೀತಾಫಲ ಹಣ್ಣುಗಳನ್ನು ಸಂಗ್ರಹಿ ಮಾರಾಟ ಮಾಡುವ ಮೂಲಕ ಉತ್ತಮ ರೀತಿಯಲ್ಲಿ ಸಂಪಾದನೆ ಮಾಡಿ ಜೀವನ ಸಾಗಿಸುತ್ತಿದ್ದಾರೆ.

**ಸ್ಥಳೀಯರಿಗೆ ಮಾರಾಟ:** ಗಡಿ ಭಾಗದ ಮಹಿಳೆಯರು ಅರಣ್ಯ ಪ್ರದೇಶದಲ್ಲಿ ಸೀತಾಫಲವನ್ನು ಸಂಗ್ರಹಿಸಿ ಸ್ಥಳೀಯ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ, ಇದು ಅವರಿಗೆ ಆದಾಯ ತಂದುಕೊಡುವ ಒಂದು ಮುಖ್ಯ ಮಾರ್ಗವಾಗಿದೆ, ಮುಂಜಾನೆಯಿಂದಲೇ ಮಹಿಳೆಯರು ಮತ್ತು ಧನ, ಕುರಿಗಾಹಿಗಳು ಅರಣ್ಯದಲ್ಲಿ ಹಾಗೂ ರೈತರ ಹೊಲಗಳಲ್ಲಿ ಸ್ವಾಭಾವಿಕವಾಗಿ ಬೆಳೆದಿರುವ ಸೀತಾಫಲವನ್ನು ಬುಟ್ಟಿಗಳಲ್ಲಿ ಸಂಗ್ರಹಿಸಿ, ಒಂದು ಬುಟ್ಟಿಗೆ 600 ರೂ.ಗೆ ಸ್ಥಳೀಯ ವ್ಯಾಪಾರಿಗಳಿಗೆ ಮಾರಾಟ ಮಾಡುವರು.

**ಹೊರ ರಾಜ್ಯಗಳಿಗೂ ಮಾರಾಟ:** ಈ ವ್ಯಾಪಾರಿಗಳು



ಹಣ್ಣನ್ನು ಬೆಂಗಳೂರು, ಹೈದರಾಬಾದ್ ಮತ್ತು ತಮಿಳುನಾಡಿನಂತಹ ನಗರಗಳಿಗೆ ರಫ್ತು ಮಾಡುತ್ತಾರೆ, ಇದು ಗ್ರಾಮೀಣ ಭಾಗದಲ್ಲಿ ಆರ್ಥಿಕವಾಗಿ ಅಭಿವೃದ್ಧಿಗೆ ಸಹಕಾರಿಯಾಗಿದೆ, ಸೀತಾಫಲ ಸಂಗ್ರಹಣೆ ಮತ್ತು ಮಾರಾಟವು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸುತ್ತದೆ, ಈ ವ್ಯಾಪಾರವು ಖಂಡಿತವಾಗಿಯೂ ಉತ್ತಮ ಜೀವನಕ್ಕೆ ಆಧಾರವಾಗಿದ್ದು. ವಿಶೇಷವಾಗಿ ಮಹಿಳೆಯರಿಗೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ಇದು ಒಂದು ಪ್ರಮುಖ ಜೀವನೋಪಾಯದ ಮಾರ್ಗವಾಗಿದೆ.

> **ಸೀತಾಫಲದ ಮಾರಾಟದಿಂದ ಪ್ರತಿ ದಿನವೂ 1000 ರೂಪಾಯಿಗಳ ಹಣ ಸಿಗುವುದರಿಂದ, ಮನೆ ಖರ್ಚುಗಳನ್ನು ನಿರ್ವಹಿಸಲು ಇದು ಅನುಕೂಲವಾಗುತ್ತದೆ.**
> ■ ರಾಧಾ, **ಸೀತಾಫಲ ಸಂಗ್ರಹಿಸುವ ಮಹಿಳೆ.**

> **ಸೀತಾಫಲದ ನೈಸರ್ಗಿಕ ಮಾರಾಟವು ಕೇವಲ ವಾಣಿಜ್ಯ ಚಟುವಟಿಕೆಯಲ್ಲ, ಇದು ಸ್ಥಳೀಯ ಸಂಪನ್ಮೂಲವನ್ನು ಬಳಸಿಕೊಂಡು ಬಡತನವನ್ನು ನಿವಾರಿಸುವ ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವ ಒಂದು ವಿಶ್ವಾಸಾರ್ಹ ಆದಾಯದ ಮೂಲವಾಗಿದೆ.**
> ■ ಬತ್ತಲಹಳ್ಳಿ ಬಿ.ಕೆ.ವೆಂಕಟೇಶ್, **ವ್ಯವಸ್ಥಾಪಕರು ಐಸಿಐಸಿ ಫೌಂಡೇಷನ್.**

ಸೀತಾಫಲದ ಗಿಡಗಳನ್ನು ಯಾರು ನೆಟ್ಟು ಬೆಳೆಸಬೇಕಾಗಿಲ್ಲ, ಅವು ನೈಸರ್ಗಿಕವಾಗಿ ಗುಡ್ಡಗಳು ಮತ್ತು ಒಣ ಭೂಮಿಯಲ್ಲಿ ಬೆಳೆಯುತ್ತವೆ. ಇದಕ್ಕೆ ಯಾವುದೇ ಹೂಡಿಕೆಯ ಅಗತ್ಯ ಇರುವುದಿಲ್ಲ, ಯಾವುದೇ ರಾಸಾಯನಿಕಗಳ ಬಳಕೆ ಇಲ್ಲದೆ ಬೆಳೆಯುವುದರಿಂದ ಹೆಚ್ಚು ಆರೋಗ್ಯಕರವಾಗಿರುತ್ತವೆ.

**ಆರೋಗ್ಯಕ್ಕೆ ಉತ್ತಮ ಫಲ:** ಸೀತಾಫಲ ಕೇವಲ ರುಚಿಕರವಾದ ಹಣ್ಣು ಮಾತ್ರವಲ್ಲ, ಅನೇಕ ವಿಶೇಷ ಗುಣಗಳು ಮತ್ತು ಪ್ರಯೋಜನಗಳನ್ನು ಹೊಂದಿರುವ ಹಣ್ಣು. ಇದನ್ನು ಶುಗರ್ ಆಫಲ್‌ಎಂದು ಕರೆಯಲಾಗುತ್ತದೆ, ಪೋಷಕಾಂಶಗಳ ಆಗರ ಸೀತಾಫಲವು ಅನೇಕ ಅಗತ್ಯ ಪೋಷಕಾಂಶಗಳನ್ನು ಸಮೃದ್ಧವಾಗಿ ಹೊಂದಿದೆ, ಇದು ಆರೋಗ್ಯಕ್ಕೆ ಬಹಳ ಮುಖ್ಯವಾಗಿದೆ, ವಿಟಮಿನ್ ಎ ಮತ್ತು ವಿಟಮಿನ್ ಸಿ ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್, ಕಬ್ಬಿಣಾಂಶ, ಗ್ಲೂಕೋಸ್ ಮತ್ತು ಫ್ರಕ್ಟೋಸ್ ಮತ್ತು ಕಾರ್ಬೋಹೈಡ್ರೇಟ್‌ಗಳು ಅಧಿಕವಾಗಿವೆ.

**ವಿಟಮಿನ್ ಎ ಇಂದ ಲಾಭಗಳು:** ವಿಟಮಿನ್ ಎ ಇಂದ ಮನುಷ್ಯನ ಚರ್ಮದ ರೋಗಗಳನ್ನು ತಡೆಗಟ್ಟುತ್ತದೆ, ಜೊತೆಗೆ ಚರ್ಮವು ಹೊಳೆಯುವಂತೆ ಮಾಡುತ್ತದೆ, ಆಂಟಿ ಬಯೋಟಿಕ್ ಗುಣಗಳು ಹೆಚ್ಚಾಗಿ ಇರುವುದರಿಂದ ರೋಗನಿರೋಧಕ ಶಕ್ತಿಯು ಹೆಚ್ಚಾಗುತ್ತದೆ ಇದರಿಂದ ಮನುಷ್ಯ ಅನಾರೋಗ್ಯದಿಂದ ಬಳಲದಂತೆ ಮಾಡಿ ಆರೋಗ್ಯಕರ ಜೀವನ ನಡೆಸಲು ಸಹಕಾರಿಯಾಗುತ್ತದೆ.

**ವಿಟಮಿನ್ ಸಿ ಇಂದ ಲಾಭ:** ವಿಟಮಿನ್ ಸಿ ಸೋಂಕು ಮತ್ತು ಅನಾರೋಗ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ, ಕಾಲಜನ್ ಎಂಬ ಪ್ರೋಟೀನ್ ಸಂಯೋಜಕ ಅಂಗಾಂಶಗಳಾದ ಚರ್ಮ, ಮೂಳೆಗಳು, ಸ್ನಾಯುಗಳು ಮತ್ತು ರಕ್ತನಾಳಗಳಿಗೆ ಅಗತ್ಯವಾಗಿದೆ, ಇದು ಗಾಯಗಳನ್ನು ಗುಣಪಡಿಸಲು ಸಹಾಯ ಮಾಡುತ್ತದೆ, ಕೆಲವು ಅಧ್ಯಯನಗಳ ಪ್ರಕಾರ, ವಿಟಮಿನ್ ಸಿ ಸಮೃದ್ಧವಾಗಿರುವ ಆಹಾರ ಸೇವನೆಯು ರಕ್ತದೊತ್ತಡ ನಿಯಂತ್ರಣಕ್ಕೆ ಸಹಕಾರಿಯಾಗಿದೆ. ಒಟ್ಟಾರೆ ಸೀತಾಫಲ ಖರೀದಿಸಿ ಸೇವನೆ ಮಾಡುವುದರಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಒಂದು ಕುಟುಂಬಕ್ಕೆ ಜೀವನ ನಡೆಸಲು ಆಸರೆಯಾದಂತಾಗುತ್ತದೆ.

---

Ind Exp Pg 04

# Agriculture dept plans AI platform to help farmers

### 1 cr farmers to get region-specific advisories, real-time info on phones

**ASHWINI M SRIPAD** @ Bengaluru

IN a first of its kind initiative in India, the Karnataka Agriculture Department is preparing to introduce an Artificial Intelligence-powered platform to provide farmers with region-specific advisories and real-time information. The system, expected to be launched by Kharif 2026, aims to benefit more than one crore farmers across the State.

Agriculture Department Director GT Putra said the platform is being developed in association with ISRO, Karnataka State Remote Sensing Applications Centre and BEL, and it will be ready in the next few months. The department has signed an MoU with BEL, and the platform will be operated from the department's head office in Bengaluru, he said.

The AI platform will send comprehensive alerts to the farmers' phones in Kannada, making it easy for farmers to use.

Deepaja SM, the joint director of agriculture (extension, training and e-governance) told *The New Indian Express* that the project is currently at the proposal stage. "We have data of more than one crore farmers in Karnataka who are registered under the Farmer Registration and Unified Beneficiary Information System (FRUBIS). This includes their location and details," she said, adding, "From sowing preparation to crop growth and harvesting, farmers will receive advisory messages throughout the agricultural cycle once the platform is ready."

Deepaja said farmers will receive alerts specific to their region or village. Before the sowing season, they will get monsoon forecasts, including information on early or delayed rains, along with suggestions on the actions they can take.

During the crop-growing stage, if there is increased humidity or any adverse weather condition, the system will send advisories on appropriate pesticide usage. Similarly, during the harvesting period, farmers will receive cyclone alerts with guidance on whether to delay the harvesting or take measures to protect their harvested crop. "All these messages will be area-specific, ensuring that farmers receive relevant and timely information", she said.

The existing Varuna Mithra interactive help desk, operated by the Karnataka State Natural Disaster Monitoring Centre (KSNDMC), already provides farmers with weather-related updates, particularly rainfall alerts. Explaining the difference, Deepaja said the proposed AI-based system will be far more detailed and comprehensive, offering information that extends beyond weather. Farmers will also be able to access updates on government schemes and receive a range of production-related advisories, she said.

---

Dec Hrd Pg 06

# 11-day flower show at Cubbon Park to debut on Nov 27

### To feature over 100 varieties of flowers and plants, including Ikebana

**Entry & parking**

Entry is Rs 30 for adults and Rs 10 for children. Schoolchildren in uniform with a valid ID can enter free. Parking arrangements will be increased during the exhibition.

BENGALURU, DHNS

The Horticulture Department will organise an 11-day flower show at Cubbon Park from November 27.

While smaller events have previously been held in collaboration with other departments, this is the first large-scale flower show at Cubbon Park.

The show will feature over 100 varieties of flowers and plants, including Ikebana displays. More than 100 stalls will offer nurseries, gardening accessories, homemade goods, and food. The department will spend about Rs 40 lakh on the event.

"We wanted to offer something for the park's visitors and create a lively atmosphere. Many ask if they can purchase our plants, so this exhibition is the perfect opportunity. We have activities for all ages. We will see how the event goes this year and decide if it will become an annual event," said G Kusuma, Deputy Director (Cubbon Park), Horticulture Department.

The exhibition will be set up from the Fountain Circle near the bandstand to the Bal Bhavan gate.

A key feature distinguishing this event from the annual Lalbagh show is the inclusion of an art display. Works by several artists, including Karnataka painter Rumale Chennabasaviah, will be exhibited. Cultural performances and competitions will also take place.

"Organisations such as the Cubbon Park Walkers' Association, Rumale Art House, and Indo American Hybrid Seeds have contributed to the exhibitions. We are all coming together to create a wholesome experience," added Kusuma.

The show will be inaugurated by Chief Secretary Shalini Rajneesh on November 27, and be will on until December 7.

# Researchers discover new species of spider in a Chikkamagaluru village, name it after 'Malenadu'

Hindu Pg 10

**Sathish G.T.**
SHIVAMOGGA

A team of researchers exploring biodiversity in the Western Ghats has discovered a new species of spider belonging to pilia, a genus of jumping spiders, at Madhugundi village in Mudigere taluk of Chikkamagaluru. Interestingly, the researchers named it "*Pilia malenadu*", to give credit to the place it was found.

**Back in 1902**

The discovery, which has been published in Zootaxa, an international journal dedicated to researches in biodiversity, is significant because the last time a species of spiders belonging to pilia genus, was discovered about 123 years ago (1902) in Kerala. There are multiple species in one genus. Further, the researchers, for the first time, have found both male and female spiders of the species.



The new species of spider that was discovered in Madhugundi in Mudigere taluk of Chikkamagaluru. SPECIAL ARRANGEMENT

Ajit Padiyar, a postgraduate in wildlife and management, working as a naturalist at River Mist, a resort at Madhugundi, the village amidst lush green, spotted the 24 individuals of the spider species, which were later named "*Pilia malenadu*". They included 17 males, three females and four juveniles. "*Pilia malenadu*" stands out from the spiders that most people are familiar with those commonly found in houses or gardens. This belongs to the genus that had not been recorded over 123 years. Finding them again and documenting the female for the first time is a major step in understanding the spider," he said.

Mr. Padiyar co-authored the research article with arachnologist specialising in taxonomy Dr. John T.D. Caleb, medical doctor A.P.C. Abhijith and IT professional Jithesh Pai, who are all interested in studying spiders. Padiyar had found saffron reedtail, a rare species of damselfly endemic to the Western Ghats at the same place last year.

"The discovery of such rare species at Madhugundi village at the foothills of Western Ghats, indicates the healthy ecosystem at the place and stress the need to retain it," Mr. Padiyar said.

Interestingly, the researchers noticed that these spiders were found only two plant species – *Memecylon umbellatum* and *Memecylon malabaricum*. In fact, the spiders were found concealed between the leaves of these plants. The researchers photographed them, preserved them and did morphological examination for documentary purposes.

"Our study shows the spiders are habitat specific. Spiders are biological controllers and essential to check on insect population. The presence of such species highlights the need for conserving the Western Ghats," said Mr. Padiyar.

# 'Jakkur Forest' project gains traction online

**An NGO is developing a 2-acre 'ecopocket' and is seeking volunteers for its plantation drives**

SHRADDHA A K
TEAM METROLIFE

A project to grow a forest spanning two acres in Jakkur has gained over 1,56,500 consolidated views on Instagram. One reel calling for volunteers to participate in the plantation drive alone received 69,000 views. The initiative, called 'Jakkur Forest', aims to develop a pocket of forest with rich biodiversity, adjacent to an upcoming residential layout.

The project has garnered support from Kannada film actors like Diganth Manchale and Samyukta Hornad, as well as Vani Murthy, a composting enthusiast known as Worm Rani on Instagram. Even companies are supporting the initiative as part of their CSR efforts.

BlueDot, a Bengaluru-based NGO that works on lake restoration, waste management, mangrove restoration and tree plantation, is executing the project.

Its founder Harsha Tej C explains what sets this plantation initiative apart. "While Cubbon Park and Lalbagh have significant biodiversity, they are spread over multiple acres and somewhat segregated. In contrast, the 'Jakkur Forest' will feature biodiversity concentrated over just two acres,"



The NGO has conducted two tree plantation drives in Jakkur so far.

he says. They are planting around 120 species of trees, most of which are "local but have been forgotten over time". These include species like Ashoka, white dammar, and mangosteen.

Harsha believes this green patch will help reduce human-animal conflicts. "Snakes will always be present, no matter where we are. What we need is not avoidance, but knowledge about snakes to coexist," he explains. He adds that this "ecopocket" will attract a variety of birds, while also enhancing the carbon sink in the area. Harsha notes that the forest is expected to become self-sufficient within two years and will require minimal maintenance, allowing nature to take its course.

The team has organised two plantation drives so far and is planning at least 20 more. The participants range from children as young as five to seniors in their 60s. "Since conservation often falls into the 'boring' category, we wanted to make it enjoyable. We include live music and food stalls to keep the spirits up," Harsha shares.

*For details or to participate in the plantation drives, visit bluedot.ngo or follow @bluedot.ngo on Instagram.*

## FIRST SIGHTING



A male Plaintive cuckoo (Cacomantis merulinus) was spotted at Varthur Lake on Saturday. According to Bengaluru's birding community, this is the first recorded sighting of the species in Karnataka. Known for its birdsong, the species is found year-round in southeast Asia, the northeastern states of India, Bangladesh, and parts of Nepal. It typically migrates to Odisha and northern Andhra Pradesh. It is the second unusual bird recorded in Bengaluru this week, after the Himalayan rubythroat. Birders say these species have travelled farther south than usual. PHOTO/MADHU CHANDRAN

Dec Hrd Pg 5B

# ಅಡಕೆ ಧಾರಣೆ ಜಿಗಿತ

**ಪುತ್ತೂರು (ದ.ಕ.):** ಕಳೆದ ಎರಡು ವಾರಗಳಿಂದ ಸ್ಥಿರವಾಗಿದ್ದ ಅಡಕೆ ಧಾರಣೆ ಈಗ ಮತ್ತೆ ಏರುಮುಖವಾಗಿದೆ.

ಹೊಸ ಅಡಕೆ ದರ ಕೆ.ಜಿಗೆ 370 ರೂ.ನಿಂದ 390 ರೂ.ಗೆ ಏರಿದೆ. ಕಳೆದೆರಡು ವಾರಗಳಿಂದ 520 ರೂ. ಇದ್ದ ಸಿಂಗಲ್ ಚೋಲ್ ಹಳೆ ಅಡಕೆ ಧಾರಣೆ, 530 ರೂ.ಗೆ ಏರಿದೆ.

530 ರೂ.ಗೆ ಖರೀದಿಯಾಗುತ್ತಿದ್ದ ಡಬಲ್ ಚೋಲ್ ಹಳೆ ಅಡಕೆಯನ್ನು ದರ 540 ರೂ.ಗೆ ಹೆಚ್ಚಿದೆ. ಕ್ಯಾಂಪ್ಕೊ ಕೂಡ ಇದೇ ದರದಲ್ಲಿ ಅಡಕೆ ಖರೀದಿಸುತ್ತಿದ್ದು, ಖಾಸಗಿ ಮಾರುಕಟ್ಟೆಯಲ್ಲಿ ಕೆಲವೆಡೆ ಈ ದರಕ್ಕಿಂತ 5 ರೂ. ಹೆಚ್ಚು ಧಾರಣೆಯಲ್ಲಿ ಮಾರಾಟ ಆಗುತ್ತಿದೆ.

**ಆವಕ ಕಡಿಮೆ:** ಮಾರುಕಟ್ಟೆಯಲ್ಲಿ ಅಡಕೆ ಆವಕ ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಈ ಬಾರಿ ಅಡಕೆ ಇಳುವರಿ ಕೊಳೆರೋಗದ ಕಾರಣ ಅರ್ಧಕ್ಕರ್ಧ ನಷ್ಟವಾಗಿರುವ ಹಿನ್ನೆಲೆಯಲ್ಲಿ



ಉತ್ಪಾದನೆ ಕುಸಿಯುವ ನಿರೀಕ್ಷೆ ಇದೆ. ಕಳೆದ ವರ್ಷವೂ ಇದೇ ಸ್ಥಿತಿಯಿದ್ದ ಕಾರಣ ಸಿಂಗಲ್ ಚೋಲ್ ಹಳೆ ಅಡಕೆ ಸಣ್ಣ ಮತ್ತು ಮಧ್ಯಮ ರೈತರಲ್ಲಿ ದಾಸ್ತಾನು ಸಾಕಷ್ಟು ಕಡಿಮೆಯಿದೆ. ದೊಡ್ಡ ಪ್ರಮಾಣದ ರೈತರು ಮಾತ್ರ ಸಿಂಗಲ್ ಚೋಲ್ ಮತ್ತು ಡಬಲ್ ಚೋಲ್ ಅಡಕೆ ದಾಸ್ತಾನು ಹೊಂದಿದ್ದು, ಅವರು ಧಾರಣೆ ಹೆಚ್ಚಳದ ನಿರೀಕ್ಷೆಯಲ್ಲಿದ್ದು ವಿಳಂಬವಾಗಿ ಅಡಕೆ ಮಾರಾಟ ಮಾಡುವ ಯೋಜನೆ ಹೊಂದಿದ್ದಾರೆ. ಹೀಗಾಗಿ ಮಾರುಕಟ್ಟೆಯಲ್ಲಿ ನಿರೀಕ್ಷಿತ ಪ್ರಮಾಣದ ಅಡಕೆ ಆವಕವಾಗುತ್ತಿಲ್ಲ.

V-karnataka Pg 12

# ಬೀಜ ಮಸೂದೆ-2025 ವಿರೋಧ ಏಕೆ?



ಪ್ರಜಾವಾಣಿ ವಾರ್ತೆ

ಬಿತ್ತನೆ ಬೀಜಗಳ ಗುಣಮಟ್ಟ ಮತ್ತು ರೈತರ ಹಕ್ಕುಗಳನ್ನು ಕಾಪಾಡುವ ದಿಸೆಯಲ್ಲಿ ಭಾರತದಲ್ಲಿ ಈಗಾಗಲೇ ಹಲವು ಕಾಯ್ದೆ, ನಿಯಮಗಳನ್ನು ಜಾರಿ ಮಾಡಲಾಗಿದೆ. ಬೀಜ ಕಾಯ್ದೆ (1966), ಬೀಜ ನಿಯಮಗಳು (1968), ಬೀಜ (ನಿಯಂತ್ರಣ) ಆದೇಶ (1983) ರಾಷ್ಟ್ರೀಯ ಬೀಜ ನೀತಿ (2002) ಸೇರಿದಂತೆ ಹಲವು ನಿಯಮಗಳಿವೆ. ದೇಶದ ಕಾನೂನುಗಳಲ್ಲಿ ಮುಖ್ಯವಾದದ್ದು ಸಸ್ಯ ವೈವಿಧ್ಯ ಮತ್ತು ರೈತರ ಹಕ್ಕುಗಳ ರಕ್ಷಣೆಯ ಕಾಯ್ದೆ–1970 (ಪಿಪಿವಿಎಫ್ಆರ್ಎ). ರೈತರ ಹಕ್ಕುಗಳ ಕುರಿತು ಜಗತ್ತಿನಲ್ಲಿರುವ ಉತ್ತಮ ಕಾಯ್ದೆಗಳಲ್ಲಿ ಇದೂ ಒಂದು ಎನ್ನಲಾಗಿದೆ. ಇವುಗಳನ್ನು ಬದಲಾಯಿಸುವ ದಿಸೆಯಲ್ಲಿ 2004 ಮತ್ತು 2019ರಲ್ಲಿ ಬೀಜ ಮಸೂದೆಗಳನ್ನು ರೂಪಿಸಲಾಗಿತ್ತು. ಆದರೆ, ರೈತರಿಂದ ತೀವ್ರ ವಿರೋಧ ವ್ಯಕ್ತವಾದದ್ದರಿಂದ ಅವು ಕಾಯ್ದೆಗಳಾಗಲಿಲ್ಲ.

ಈಗ ಬಿತ್ತನೆ ಬೀಜಗಳ ಗುಣಮಟ್ಟ, ಉತ್ಪಾದನೆ ಮತ್ತು ಮಾರಾಟವನ್ನು ನಿಯಂತ್ರಿಸುವ ಉದ್ದೇಶದಿಂದ ಬೀಜ ಕಾಯ್ದೆ 1966 ಮತ್ತು 1983ರ ಬೀಜ (ನಿಯಂತ್ರಣ) ಆದೇಶಕ್ಕೆ ತಿದ್ದುಪಡಿ ಮಾಡಿ ಬಿತ್ತನೆ ಬೀಜ ಮಸೂದೆ–2025 ಅನ್ನು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ರೂಪಿಸಿದೆ. ಅದರ ವೆಬ್ಸೈಟ್‌ನಲ್ಲಿ ಮಸೂದೆಯ ಕರಡನ್ನು ಪ್ರಕಟಿಸಲಾಗಿದ್ದು, ರೈತರು, ಸಂಘ ಸಂಸ್ಥೆಗಳ ಪ್ರತಿಕ್ರಿಯೆಯನ್ನು ಆಹ್ವಾನಿಸಿದೆ. ಉದ್ಯಮ ಹಾಗೂ ರೈತರ ಸದ್ಯದ ಅಗತ್ಯಗಳ ಆಧಾರದಲ್ಲಿ ಮಸೂದೆ ರೂಪಿಸಲಾಗಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಮಸೂದೆ ಕುರಿತ ಆಕ್ಷೇಪಣೆಗಳನ್ನು ಎಂಎಸ್ ವರ್ಡ್ ಮತ್ತು ಪಿಡಿಎಫ್ ಮಾದರಿಯಲ್ಲಿ jsseeds-agri@gov.in ವಿಳಾಸಕ್ಕೆ 2025ರ ಡಿ.11ರ ಒಳಗೆ ಇ–ಮೇಲ್ ಕಳುಹಿಸಬಹುದು ಎಂದು ಅದು ತಿಳಿಸಿದೆ.

ಆದರೆ, ಮಸೂದೆಯಲ್ಲಿನ ಹಲವು ಅಂಶಗಳಿಗೆ ರೈತರು, ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ರೈತರ ಹಕ್ಕುಗಳಿಗಿಂತ ಕಾರ್ಪೊರೇಟ್ ಹಿತಾಸಕ್ತಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

ಆಧಾರ: ಕರಡು ಬೀಜ ಮಸೂದೆ–2025, ಪಿಟಿಐ, ಡೌನ್ ಟು ಅರ್ಥ್, ಸೆಂಟರ್ ಫಾರ್ ಸಸ್ಟೈನಬಲ್ ಅಗ್ರಿಕಲ್ಚರ್

## ಕೇಂದ್ರದ ಕೈಯಲ್ಲಿ ಅಧಿಕಾರ

ಮಸೂದೆಯು ಕೇಂದ್ರ ಸರ್ಕಾರಕ್ಕೆ ಹೆಚ್ಚು ಅಧಿಕಾರ ನೀಡುತ್ತದೆ ಎಂಬುದು ಮತ್ತೊಂದು ಆರೋಪ. 38ನೇ ಸೆಕ್ಷನ್, ಯಾವುದೇ ರಾಜ್ಯಗಳಿಗೆ ಮತ್ತು ಕೇಂದ್ರ ಬೀಜ ಸಮಿತಿಗೆ ಸಲಹೆ ನೀಡುವ ಅಧಿಕಾರವನ್ನು ಕೇಂದ್ರಕ್ಕೆ ಕೊಡುತ್ತದೆ. 'ನೀತಿ'ಯ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರವೂ ಅದರದ್ದೇ.

ಸೆಕ್ಷನ್ 41ರ ಪ್ರಕಾರ, ಈ ಕಾಯ್ದೆಯ ಅಡಿಯಲ್ಲಿ ಮಾಡಲಾಗುವ ಯಾವುದೇ ಆದೇಶವು, ಈ ಕಾಯ್ದೆಯನ್ನು ಬಿಟ್ಟು ಬೇರೆ ಯಾವುದೇ ಕಾನೂನು, ನಿಬಂಧನೆಗಳಿಗೆ ಒಳಪಡುವುದಿಲ್ಲ. ರಾಜ್ಯಗಳಲ್ಲಿ ಜಾರಿಯಲ್ಲಿರುವ ಬೀಜಕ್ಕೆ ಸಂಬಂಧಿಸಿದ ಕಾನೂನುಗಳು, ಆದೇಶಗಳ (ಬೆಲೆ ನಿಗದು, ವ್ಯಾಪಾರ, ಪರವಾನಗಿ ಇತ್ಯಾದಿ) ಅಡಿ ಕೈಗೊಂಡ ತೀರ್ಮಾನಗಳನ್ನು ಇದು ರದ್ದುಪಡಿಸಬಹುದಾಗಿದೆ. ಹೀಗಾದಲ್ಲಿ ರಾಜ್ಯಗಳ ಸ್ವಾಯತ್ತೆಗೆ ಧಕ್ಕೆಯಾಗಲಿದೆ ಎಂಬ ಕಳವಳವೂ ವ್ಯಕ್ತವಾಗಿದೆ.



## ತುರ್ತು ಸಂದರ್ಭದಲ್ಲಷ್ಟೇ ಬೆಲೆ ನಿಯಂತ್ರಣ

ಸೆಕ್ಷನ್ 22 ಬೆಲೆಯ ನಿಯಂತ್ರಣದ ಬಗ್ಗೆ ಹೇಳುತ್ತದೆ. ಆದರೆ, ಇದು ರೈತರು ಹಿಂದಿನಿಂದಲೂ ಮುಂದಿಟ್ಟಿರುವ ಬೇಡಿಕೆಯ ರೀತಿಯಲ್ಲಿ ಇಲ್ಲ ಎಂಬುದು ರೈತ ಸಂಘಟನೆಗಳ ಆರೋಪ. ಬಿತ್ತನೆ ಬೀಜಗಳ ಕೊರತೆ, ಕೃತಕ ಬೆಲೆ ಏರಿಕೆ ಅಥವಾ ಏಕಸ್ವಾಮ್ಯದ ಬೆಲೆ ನಿಗದಿಯಂತಹ 'ತುರ್ತು ಸನ್ನಿವೇಶ'ಗಳಲ್ಲಿ ಬೆಲೆ ನಿಯಂತ್ರಣ ಮಾಡಲು ಕೇಂದ್ರ ಸರ್ಕಾರಕ್ಕೆ ಈ ಮಸೂದೆ ಅವಕಾಶ ನೀಡುತ್ತದೆ. ಬಿತ್ತನೆ ಬೀಜಗಳಿಗೆ ಶಾಶ್ವತವಾದ ಬೆಲೆ ಮತ್ತು ರಾಯಧನದ ವ್ಯವಸ್ಥೆ ಬೇಕು ಮತ್ತು ಇದಕ್ಕಾಗಿ ಒಂದು ಅಧಿಕೃತ ಸಂಸ್ಥೆಯ ಅಗತ್ಯವಿದೆ ಎಂಬುದು ರೈತರ ದೊಡ್ಡ ಬೇಡಿಕೆ. ಕರಡು ಮಸೂದೆಯಲ್ಲಿ ಇಂತಹ ಪ್ರಸ್ತಾಪಗಳಿಲ್ಲ.

## ಆಕ್ಷೇಪಗಳೇನು?

- ಗುಣಮಟ್ಟದ ಬಿತ್ತನೆ ಬೀಜಗಳ ಉತ್ಪಾದನೆ ಮತ್ತು ಪೂರೈಕೆಯನ್ನು ಬಲಪಡಿಸುವುದು ಮಸೂದೆಯ ಉದ್ದೇಶ ಎಂದು ಕರಡಿನ ಆರಂಭದಲ್ಲೇ ಹೇಳಲಾಗಿದೆ. ಆದರೆ, ಮಸೂದೆಯಲ್ಲಿ ಎಲ್ಲಿಯೂ ರೈತರ ಹಕ್ಕುಗಳು, ಕಳಪೆ ಬೀಜದಿಂದ ಉಂಟಾದ ಬೆಳೆನಷ್ಟ ಪರಿಹಾರದ ಪ್ರಸ್ತಾಪವೇ ಇಲ್ಲ. ಕಂಪನಿಗಳ ವ್ಯಾಪಾರ/ವಹಿವಾಟು ಸುಗಮಗೊಳಿಸುವುದೇ ಮಸೂದೆಯ ಮುಖ್ಯ ಉದ್ದೇಶವಾಗಿದ್ದು, ರೈತರ ಹಿತಾಸಕ್ತಿ, ಹಕ್ಕುಗಳು ಕಡೆಗಣಿಸಲ್ಪಟ್ಟಿವೆ
- ಹಲವು ಕಂಪನಿಗಳ ಕಳಪೆ ಗುಣಮಟ್ಟದ ಬೀಜದಿಂದ ನಷ್ಟ ಅನುಭವಿಸುವ ಪ್ರಕರಣಗಳು ಪ್ರತಿವರ್ಷ ಪುನರಾವರ್ತನೆಯಾಗುತ್ತಿವೆ. ಇಂಥ ಸಂದರ್ಭಗಳಲ್ಲಿ ಬೆಳೆನಷ್ಟ ಪರಿಹಾರ ಪಡೆಯಲು ರೈತರು ನ್ಯಾಯಾಲಯಗಳಿಗೆ ಹೋಗುವುದೊಂದೇ ಆಯ್ಕೆ. ಆದರೆ, ರೈತರಿಗೆ ಇದು ಸಾಧ್ಯವಿಲ್ಲ. ಮಸೂದೆಯು ಈ ಕುರಿತು ವಾಸ್ತವಿಕವಾದ ಯಾವುದೇ ಪರಿಹಾರ ಕ್ರಮವನ್ನು ಒಳಗೊಂಡಿಲ್ಲ
- ಕಂಪನಿಗಳ ಹೊರೆಯನ್ನು ಕಡಿಮೆ ಮಾಡುವ ದಿಸೆಯಲ್ಲಿ ಸಣ್ಣ ತಪ್ಪುಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಸಣ್ಣ, ಮಧ್ಯಮ ಮತ್ತು ಗಂಭೀರ– ಹೀಗೆ ಅಪರಾಧದ ಪ್ರಮಾಣವನ್ನು ಆಧರಿಸಿ ಮೂರು ಹಂತಗಳಲ್ಲಿ ದಂಡವನ್ನು ವಿಧಿಸಲಾಗುತ್ತದೆ. ಕಳಪೆ ಗುಣಮಟ್ಟದ ಬೀಜ ಮಾರುವುದು, ಎಸ್ಎಟಿಎಚ್ಐ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಡೇಟ್ ಮಾಡದೇ ಇರುವುದರಂಥ ಸಣ್ಣ ಅಪರಾಧಗಳಿಗೆ ದಂಡವು ₹1 ಲಕ್ಷದಿಂದ ಆರಂಭವಾಗುತ್ತದೆ. ನಕಲಿ ಅಥವಾ ನೋಂದಾಯಿತವಲ್ಲದ ಬೀಜಗಳನ್ನು ಮಾರುವುದರಂಥ ಗಂಭೀರ ಅಪರಾಧಗಳಿಗೆ ₹30 ಲಕ್ಷದವರೆಗೆ ದಂಡ ಮತ್ತು ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಮಸೂದೆ ಅವಕಾಶ ಕಲ್ಪಿಸಿದೆ. ಆ ದಂಡವು ರಾಜ್ಯಗಳಿಗೆ ಪಾವತಿಯಾಗುತ್ತದೆಯೇ ವಿನಾ ರೈತರಿಗೆ ಸಿಗುವುದಿಲ್ಲ
- ಕಾಯ್ದೆಯ ಅಡಿಯಲ್ಲಿ ಬಿತ್ತನೆ ಬೀಜಗಳನ್ನು ನೋಂದಣಿ ಮಾಡುವುದು ಕಡ್ಡಾಯ. ಉತ್ಪಾದಕರು (ಕಂಪನಿಗಳು), ಬೀಜ ಸಂಸ್ಕರಣ ಘಟಕಗಳು, ಡೀಲರ್‌ಗಳು, ವಿತರಕರು, ನರ್ಸರಿಗಳೂ ನೋಂದಣಿ ಮಾಡಬೇಕು. ಆದರೆ, ಕಾಯ್ದೆಯ ಅಡಿಯಲ್ಲಿ ನೋಂದಣಿ ಮಾಡಿದ ಬೀಜಗಳನ್ನು ರೈತರು ಬೆಳೆಯಬಹುದು, ಬಿತ್ತನೆ ಮಾಡಬಹುದು, ಮರುಬಿತ್ತನೆ ಮಾಡಬಹುದು, ಸಂರಕ್ಷಿಸಬಹುದು, ಬಳಸಬಹುದು, ಹಂಚಿಕೊಳ್ಳಬಹುದು ಅಥವಾ ಅವರ ಜಮೀನಿನಲ್ಲಿ ಬೆಳೆದ ಬೀಜವನ್ನು ಮಾರಾಟವನ್ನೂ ಮಾಡಬಹುದು. ಆದರೆ, ಆ ಬೀಜಗಳನ್ನು ಅಥವಾ ಗಿಡಗಳನ್ನು ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡುವುದಕ್ಕೆ ಅವಕಾಶ ಇಲ್ಲ. ಕರಡು ಮಸೂದೆಯು ವ್ಯಕ್ತಿಗತ ರೈತರ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತದೆ. ರೈತರೇ ಸೇರಿ ಸ್ಥಾಪಿಸಿರುವ ರೈತ ಉತ್ಪಾದಕ ಕಂಪನಿಗಳು, ಸ್ವಸಹಾಯ ಸಂಘಗಳು, ಸಮುದಾಯ ಸಂಘಟನೆಗಳು ಸಂರಕ್ಷಿಸುತ್ತಿರುವ ಬೀಜ ತಳಿಗಳ ಮಾರಾಟಕ್ಕೆ ತೊಂದರೆಯಾಗುವ ಸಾಧ್ಯತೆ ಇದೆ. ರೈತ ಉತ್ಪಾದಕ ಕಂಪನಿಗಳು, ಸಮುದಾಯ ಸಂಘಟನೆಗಳು ಸ್ಥಳೀಯ ಬೀಜ ಬ್ಯಾಂಕ್‌ಗಳನ್ನು ತೆರೆದು ಅವುಗಳನ್ನು ಸಂರಕ್ಷಿಸಿ, ಅವುಗಳನ್ನೇ ಬಳಸಲು ರೈತರಿಗೆ ಪ್ರೇರೇಪಿಸುತ್ತಿವೆ. ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದರೆ ಇಂತಹ ಸಂಘ ಸಂಸ್ಥೆಗಳಿಗೆ ತೊಂದರೆಯಾಗಲಿದೆ
- ಮಸೂದೆಯ ಪ್ರಕಾರ, ಬಿತ್ತನೆ ಬೀಜದ ಕೃಷಿ ಮತ್ತು ಬಳಕೆಯ ಮೌಲ್ಯದ (ವಿಸಿಯು) ಪರೀಕ್ಷೆ ನಡೆಸಲು ಸರ್ಕಾರವು ವಿದೇಶಿ ಸಂಸ್ಥೆಯನ್ನು ಗೊತ್ತುಪಡಿಸಬಹುದು (ಸೆಕ್ಷನ್ 16/3). ಸರ್ಕಾರವು ವಿದೇಶಿ ಬೀಜ ಪ್ರಮಾಣೀಕರಣ ಸಂಸ್ಥೆಗಳನ್ನು ಪರಿಗಣಿಸಬಹುದು (ಸೆಕ್ಷನ್ 27). ಈ ಮೂಲಕ ಮಸೂದೆಯು, ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾಲಯಗಳ (ಎಸ್ಎಯು) ಅಧಿಕಾರವನ್ನು ಮೊಟಕುಗೊಳಿಸಿದೆ. ಜತೆಗೆ, ಸ್ಥಳೀಯ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬದಲಿಗೆ ವಿದೇಶಿ ಸಂಸ್ಥೆಗಳಿಗೆ ಬೀಜ ಪರೀಕ್ಷೆಯ ಜವಾಬ್ದಾರಿ ವಹಿಸುವುದು ಭಾರತದ ವೈವಿಧ್ಯಮಯವಾದ, ಹವಾಮಾನಕ್ಕೆ ಹೊಂದುವ ಕೃಷಿ ಪದ್ಧತಿಗಳ ದೃಷ್ಟಿಯಿಂದ ಅಪೇಕ್ಷಣೀಯವಲ್ಲ. ರೈತರ ಆದಾಯ, ಕೃಷಿ, ಪರಿಸರದ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಲಿದೆ. ದೇಶದಲ್ಲಿ ಕುಲಾಂತರಿ ತಳಿ (ಜಿಎಂ) ಬೀಜ ಮಾರಾಟ ಹೆಚ್ಚಾಗಬಹುದು
- ಕೇಂದ್ರ ಸರ್ಕಾರವು ಕಾರ್ಪೊರೇಟ್ ಕಂಪನಿಗಳಿಗೆ ಮಣೆ ಹಾಕಲು ಹೊರಟಿದೆ ಎನ್ನುವುದು ಇನ್ನೊಂದು ಆಕ್ಷೇಪ. ಮಸೂದೆಯ 17ನೇ ಸೆಕ್ಷನ್‌ನ 8ನೇ ಉಪ ಸೆಕ್ಷನ್ ಪ್ರಕಾರ, ಬಿತ್ತನೆ ಬೀಜಗಳ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿರುವವರನ್ನು ಪ್ರೋತ್ಸಾಹಿಸುವುದಕ್ಕಾಗಿ ಮತ್ತು ಸುಗಮ ವ್ಯಾಪಾರಕ್ಕೆ ಅನುವು ಮಾಡುವುದಕ್ಕಾಗಿ ಹಲವು ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಕಂಪನಿಗಳಿಗಾಗಿ ಪಾರದರ್ಶಕವಾದ ಕೇಂದ್ರ ಮಾನ್ಯತಾ ವ್ಯವಸ್ಥೆಯನ್ನು ರೂಪಿಸಲಿದೆ. ಈ ವ್ಯವಸ್ಥೆಯಡಿ ಮಾನ್ಯತೆ ಪಡೆದ ಕಂಪನಿಗಳು, ಮಾನ್ಯತೆ ಪಡೆದ ದಿನದಿಂದ ಈ ಸೆಕ್ಷನ್ ಅಡಿಯಲ್ಲಿ ನೋಂದಣಿಯಾಗಿವೆ ಎಂದು ಪರಿಗಣಿಸಲಾಗುತ್ತದೆ. ಇದು ಕಾರ್ಪೊರೇಟ್ ಕಂಪನಿಗಳಿಗೆ ಪ್ರಾಮುಖ್ಯ ನೀಡುವುದರ ಜೊತೆಗೆ, ರಾಜ್ಯಗಳ ಅಧಿಕಾರವನ್ನೂ ಕಸಿದುಕೊಳ್ಳುತ್ತದೆ. ದೊಡ್ಡ ಕಂಪನಿಗಳು ಮೂಲ ಮಾನ್ಯತಾ ಪ್ರಮಾಣಪತ್ರವನ್ನು ಸಲ್ಲಿಸಿದರೆ ರಾಜ್ಯಗಳು ಅದನ್ನು ಅಂಗೀಕರಿಸಿ, ರಾಜ್ಯದ ನೋಂದಣಿ ಪತ್ರದಲ್ಲಿ ಈ ಕಂಪನಿಗಳ ವಿವರಗಳನ್ನು ದಾಖಲಿಸಿಕೊಳ್ಳಬೇಕು. ಹೀಗಾದಾಗ, ರಾಜ್ಯ ಸರ್ಕಾರಗಳು ಆ ಕಂಪನಿಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳಲಿವೆ. ಹಲವು ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಕಂಪನಿಗಳು ಈ ಮಾನ್ಯತೆಯನ್ನು ಪಡೆಯುವ ಮೂಲಕ ಇಡೀ ದೇಶದ ಮಾರುಕಟ್ಟೆಗೆ ತೆರೆದುಕೊಳ್ಳಲಿವೆ.

## 26ಕ್ಕೆ ಪ್ರತಿಭಟನೆ



ತಕ್ಷಣವೇ ಈ ಕರಡು ಮಸೂದೆಯನ್ನು ವಾಪಸ್ ಪಡೆಯಬೇಕು ಎಂದು 250ಕ್ಕೂ ಹೆಚ್ಚು ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

'ಇದು ದೇಶದ ಬಿತ್ತನೆ ಬೀಜಗಳ ಸಾರ್ವಭೌಮತ್ವಕ್ಕೆ ಬೆದರಿಕೆ ಒಡ್ಡಲಿದೆ. ಬೀಜ ಕ್ಷೇತ್ರದಲ್ಲಿ ಏಕಸ್ವಾಮ್ಯ ಸಾಧಿಸಲು ಕಾರ್ಪೊರೇಟ್ ಕಂಪನಿಗಳಿಗೆ ಅವಕಾಶ ನೀಡಲಿದೆ, ಬಿತ್ತನೆ ಬೀಜವನ್ನು ಸಂರಕ್ಷಿಸುವ, ಬಳಸುವ, ಹಂಚುವ ರೈತರ ಹಕ್ಕನ್ನು ಕಸಿದುಕೊಳ್ಳಲಿದೆ' ಎಂದು ಹೇಳಿದೆ.

ಅಖಿಲ ಭಾರತ ಕಿಸಾನ್ ಸಭಾ ಕೂಡ ಇಂತಹುದೇ ಅಭಿಪ್ರಾಯ ವ್ಯಕ್ತಪಡಿಸಿದ್ದು, 'ಈ ಶಾಸನವು ವಿನಾಶಕಾರಿ. ದೇಶದ ಕೃಷಿಯನ್ನು ನಾಶಮಾಡಲಿದೆ' ಎಂದು ಆತಂಕ ವ್ಯಕ್ತಪಡಿಸಿದೆ. ಮಸೂದೆಯು ಕಾನೂನು ಆಗಿ ಜಾರಿಗೆ ಬಂದರೆ, ಬಿತ್ತನೆ ಬೀಜಗಳು ದುಬಾರಿಯಾಗಲಿವೆ ಎಂದು ಹೇಳಿದೆ. ದೆಹಲಿಯಲ್ಲಿ ನಡೆದ ಪ್ರತಿಭಟನೆಯ ಐದನೇ ವರ್ಷಾಚರಣೆಯ ದಿನವಾದ ಇದೇ 26ರಂದು ಈ ಮಸೂದೆ ವಿರುದ್ಧ ಪ್ರತಿಭಟನೆ ನಡೆಸಲೂ ಅದು ಕರೆ ನೀಡಿದೆ.